doc-19
T.P-2

Regc No A 1229 | 43rd Year | Sri 'Satyavadi' Mysore | 25—3—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು: ಆರಮನೆ ಸಿಂಸ್ಕೇದಾರ್ ಎ. ವಿ ಸುಬ್ಬರಾಯುರು [ಬಿಡಿ ಪ್ರತಿಗೆ ೩ ಪೈ

Protectthecow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಕರನಿರಾಕರಣ ಚಳುವಳಿಯನು ಹೂಡಲು ಮರಾಠಿಗರ ನಿರೋಧ

ಬೆಳಗಾಂ

ಬೆಳಗಾಂ 24 — ಬೊಂಬಾಯಿನ ಮಂತ್ರಿನಾಯಕರಿಗೆ ಸ್ಥಳೀಯ ಮಂತ್ರಿನಾಯಕರೊಡನೆ ನಿವಾಣಿ, ಖಾನಾಪುರ ಮತ್ತು ಬೆಳಗಾಂನಲ್ಲಿ ಕರನಿರಾಕರಣ ಚಳುವಳಿ ಹೂಡುವ ಕುರಿತು ತೀವ್ರವಿರೋಧ ಬಂದಿತೆಂದು ವರದಿ ಆಗಿದೆ. ಎಲ್ಲ ಪ್ರದೇಶಗಳನ್ನು ಬಿಟ್ಟು ಬೆಳಗಾಂನಲ್ಲಿ ಮಾತ್ರ ಪ್ರದರ್ಶನ ನಡೆಯುವಂತೆ ಮರಾಠಿಯವರು ತೀರ್ಮಾನಿಸಿದ್ದರೂ ಕಳೆದವಾರ ಅಲ್ಲೂ ನಡೆಯುಲಿಲ್ಲ

ಶಿಸ್ತುಭಂಗ

ಆಕೋಲಾ 23 — ದ್ವಿಭಾಷಾ ಬೊಂಬಾಯಿ ಪ್ರಾಂತ ವಿಭಜನೆ ಆಗಬೇಕೆಂದು ಕಾಂಗ್ರೆಸಿಗರು ಪ್ರಚಾರವನ್ನಾಡುವುದು ಶಿಸ್ತುಭಂಗವೆಂದು ವಿದರ್ಭ ಕಾಂಗ್ರೆಸ್ ತಿಳಿಸಿದೆ.

ರೈಲು ತಡೆ

ಅಂಬಾಲಾ 24 — ಈ ಬೆಳಿಗ್ಗೆ ಉತ್ತರ ರೈಲ್ವೆಯ ಜಲಂಧರ-ನಾಳೆಕೋದರ ವಿಭಾಗದ ರೈಲು ಗಾಡಿಯ ಚಾಲಕರು ಹೊಲಿ ಕಾರಣ 3 ಗಂಟೆ ಪ್ರಯಾಣ ಮಾಡುವುದು ತಡವಾಯಿತು

2 ತಡೆ ಗೆಲವು

ಪುಟ್ಟಮಂಡಿ 24 — ಮಂತ್ರಿಮಂಡಲದ ಅಧ್ಯಕ್ಷ, ನೇಪಾಳ ಕಾಂಗ್ರೆಸು ಪಕ್ಷದ ಸಾರ್ವಜನಿಕ ಪುಂಜೀರರು ನೇಪಾಳ ಸಂವಿಧಾನ ಸಭೆಗೆ ಆಯ್ಕೆ ಆಗಿರುವ ಮತ್ತೊಬ್ಬರು ಕ್ಷೇತ್ರದಿಂದ ಇನ್ನಾಗಾಗಲೆ ಆಯ್ಕೆ ಆಗಿರುವರು ಇವರ ಸ್ಪರ್ಧೆಯಿಂದ ಇನ್ನೊಂದು ಕ್ಷೇತ್ರ ಅಭಿವೃದ್ಧಿಯ ಫಲಿತಾಂಶ ಬರಬೇಕಾಗಿದೆ

ಶಾಲೆಯ ಪಂಚಾಂಗ

ಮದ್ರಾಸಿನ ಶಿಕ್ಷಣ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ಅವರಿಂದ ದಸ್ತ

ಚುನಾವಣೆಗೆ ಸ್ಪರ್ಧಿಸಲವಕಾಶ

ತಿರುವೇಂದ್ರಂ 23 — ಖಾಸಗಿ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು ಚುನಾವಣೆಯಲ್ಲಿ ಸ್ಪರ್ಧಿಸಬಹುದೆಂದು ಶಿಕ್ಷಣ ಮಂತ್ರಿ ಶ್ರೀ ಮುಂಡಾಸೆರಿ ತಿಳಿಸಿದ್ದಾರೆ

ಪ್ರಾಣಿಸಂಗ್ರಹಾಲಯ ಪ್ರಗತಿ

ಇನ್ನು ಹತ್ತು ವರ್ಷಗಳಲ್ಲಿ ಲಂಡನ್ನಿನ ಪ್ರಾಣಿಸಂಗ್ರಹಾಲಯವನ್ನು 20 ಲಕ್ಷ ಪೌಂಡಿನಿಂದ 30 ಲಕ್ಷ ಪೌಂಡಿನವರೆಗೆ ವೆಚ್ಚ ಮಾಡಿ ಅಭಿವೃದ್ಧಿಪಡಿಸಲಾಗುವದು.

ಹೆಚ್ಚು ಕೆಲಸಮಾಡಿ

ಮಧುರೈ 23 — ಸ್ಥಳೀಯ ಗಿರಣಿ ಕಾರ್ಮಿಕಸಂಘದ ವಾರ್ಷಿಕಾಧಿವೇಶನದಲ್ಲಿ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕಾಮರಾಜನಾಡಾರರು ಮಾತನಾಡುತ್ತ ಹೆಚ್ಚು ಕೂಲಿಗಿಂತ ಹೆಚ್ಚು ಕೆಲಸಕ್ಕೆ ಕಾರ್ಮಿಕರು ಗಮನಕೊಡಬೇಕೆಂದರು

ದೋಣಿ ಮುಳುಗಿ ಮರಣ

ಕಾಲಿಹಾರ್ 28 — ಕೋಸಿ ನದಿಯಲ್ಲಿ 20 ಪ್ರಯಾಣಿಕರಿಂದ ಕೂಡಿದ್ದ ದೋಣಿ ಮುಳುಗಿ ಹೋಗಿದೆ ಎಂಬ ಭೀತಿ ಇದೆ ಈ ದೋಣಿಯಲ್ಲಿ ಸಣ್ಣ ವ್ಯಾಪಾರಿಗಳಾರು ಇದ್ದರು

ಸೂಕ್ತ ಕಾರ್ಯಕ್ರಮ

ನವದೆಹಲಿ 23— ಲಂಡನ್ ವೆಸ್ಟ್‌ಮಿನಿಸ್ಟರ್ ಬ್ಯಾಂಕಿನಲ್ಲಿ ಇಟ್ಟಿನ ಹೈದರಾಬಾದು ರಾಜ್ಯದ 1 ಮಿಲಿಯ ಪೌಂಡುಗಳಿಗೂ ಹೆಚ್ಚಾದ ಹಣವನ್ನು ಪಡೆಯುಲು ಸಕಾಲದಲ್ಲಿ ಸೂಕ್ತ ಕಾರ್ಯ ಕೈಗೊಳ್ಳಲಾಗುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಕೊಲೆ ಸಂಬಂಧದಲ್ಲಿ ಬಂಧನ

ಗುಡಿಬಂಡ 21 — ಮಾರ್ಚ್ 5 ನೆಯ ತಾ|| ತೀವ್ರ ಗಾಯಗಳೊಡನೆ ಬಯಲಿನಲ್ಲಿ ವೆಂಕಟಮ್ಮ ಎಂಬವಳ ದೇಹ ಸಿಕ್ಕಿ ಈ ಸಂಬಂಧದಲ್ಲಿ ಅಂಜನಿಗ ಎಂಬ 25 ವರ್ಷದ ಕರುಣನ ಬಂಧನವಾಗಿದೆ ಪಾಸಿಕ್ಯೂಷನ್ನಿನ ಪ್ರಕಾರ ವೆಂಕಟಮ್ಮನನ್ನು ಅವನು ಇಟ್ಟುಕೊಂಡಿದ್ದನೆಂದೂ ಅವಳ ನಡತೆಯ ಬಗ್ಗೆ ಸಂಶಯಬಂದು ಈ ಕೃತ್ಯ ನಡೆಸಿದನೆಂದು ಹೇಳಲಾಗಿದೆ.

ಜನರ ಸುಖಕ್ಕೆ ದುಡಿಯಿರಿ

ಷೋಲಾಪುರ 25— ಜನತೆಯ ಸುಖಕ್ಕಾಗಿ ಮುನಿಸಿಪಲ್ ಕೌನ್ಸಿಲರುಗಳು ಕೆಲಸಮಾಡಬೇಕೆಂದು, ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್ನರು, ಇಲ್ಲಿಯ ಪೌರಸಭೆಯವರಿಂತ್ತ ಮಾನಪತ್ರಕ್ಕೆ ಕೊಟ್ಟ ಉತ್ತರದಲ್ಲಿ ತಿಳಿಸಿದರು.

ಪಂಚಾಂಗ ಸ್ವೀಕಾರ

ಜ್ಯೋತಿಷ ಧರ್ಮಶಾಸ್ತ್ರವಿದ್ವಾಂಸ ಶ್ರೀ ನ ಕೃಷ್ಣಜೋಯಿಸರಿಂದ ಗುಣಿಸಲ್ಪಟ್ಟ, ಮಹಾವಿದ್ವಾಂಸ ಧರ್ಮಾಧಿಕಾರಿ ದೈವಜ್ಞ ಶಿಖಾಮಣಿ, ಶ್ರೀ ಸಂಪತ್ಕೃಷ್ಣ ಜೋಯಿಸರಿಂದ ಪರಿಶೋಧಿಸಲ್ಪಟ್ಟಿರುವ ವಿಕಾರಿ ಸಂವತ್ಸರದ ಸಿದ್ಧಾಂತ ಮತ್ತು ವಾಕ್ಯ ಪಂಚಾಂಗವನ್ನು ಸಾದರದಿಂದ ಸ್ವೀಕರಿಸಿದ್ದೇವೆ ಉಪಯುಕ್ತವಾದ ಮತ್ತು ಅವಶ್ಯಕವಾದ ಜ್ಯೋತಿಷ್ಯ ವಿಷಯುಗಳಿದ್ದು, ತಿಳಿದು ಕೊಳ್ಳಲು ಅನುಕೂಲವಾಗಿ ವಿವರಿಸಲಾಗಿದೆ. ಮೇಷಾದಿ ರಾಶಿಗಳಿಂದ ಗೋಚಾರ ಫಲವು ಪ್ರಕಟಿಸಲಾಗಿರುವದು ಪ್ರಯೋಜನಕರವಾಗಿದೆ.

———

ನವದೆಹಲಿ 23 — ಜುಲೈ ತಿಂಗಳಿನಲ್ಲಿ ಅಧ್ಯಕ್ಷ ಐಸೆನ್‌ಹೋವರ್ ಭಾರತಕ್ಕೆ ಬರಬೇಕಾದುದು ಈಗ ಮುಂದುವರಿದಿದೆ

ಅಪೀಲಿಗೆ ಅನುಮತಿ

ಮದ್ರಾಸು 24 — ಮಧುರಾದ ತಮಿಳು ದಿನಪತ್ರಿಕೆ ತಮಿಳು ನಾಡುವಿನ ಮಾಪರು ಪ್ರೂಫ್ ರೀಡಾಂಗಳನ್ನು ಮತ್ತೆ ಕಲಸಕ್ಕೆ ತೆಗೆದುಕೊಳ್ಳಬೇಕೆಂದು ವಾಧುರಾದ ಲೇಬರ್ ಕೋರ್ಟು ಜಡ್ಜ್ ಮಾಡಿರುವುದನ್ನು ಮದ್ರಾಸು ಹೈಕೋರ್ಟಿನ ಜಡ್ಜ್ ಶ್ರೀ ಪಿ ವಿ. ಬಾಲಕೃಷ್ಣ ಅಯ್ಯರ್ ರದ್ದುಗೊಳಿಸುವಂತೆ ಮಾಡಿದ ತೀರ್ಪಿನ ವಿರುದ್ಧ ವಾದಿಸಿ ಪತ್ರಿಕೋದ್ಯೋಗಿ ಸಂಘ ಅಪೀಲು ಮಾಡಿದ್ದನ್ನು ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ. ವಿ. ರಾಜಮನ್ನಾರ್ ಮತ್ತು ಜಡ್ಜ್ ಎಸ್. ಗಣಪತಿ ಪಿಳ್ಳೆಯವರಿಂದಕೂಡಿದ ಡಿವಿಜನ್ ಬೆಂಚು ಅನುಮತಿ ಕೊಟ್ಟಿತು.

— × —

ವಾರಣಾಸಿ 23 — ಪುರಾತನ ವಿಶ್ವನಾಥ ದೇವಾಲಯವನ್ನು ಮತ್ತೆ ಪಡೆಯಲು 3 ಮಂದಿ ಹಿಂದೂಮಹಾಸಭೆ ಸತ್ಯಾಗ್ರಹಿಗಳು ರಾಷ್ಟ್ರಪತಿಭವನ ಸತ್ಯಾಗ್ರಹ ನಡೆಸಲು ಪ್ರಾರಂಭಮಾಡಿದಾಗ ದಸ್ತಗಿರಿ ಮಾಡಲ್ಪಟ್ಟರು. ಪ್ರತಿ ಸೋಮವಾರ ಸತ್ಯಾಗ್ರಹ ನಡೆಸಲಾಗುವುದೆಂದು ಪ್ರಕಟಿಸಲಾಗಿದೆ

ತಿರುಚರಪಳ್ಳಿ 23 — ನಿನ್ನೆ ಶ್ರೀರಂಗದ ರಂಗನಾಥಸ್ವಾಮಿ ದೇವಾಲಯದಲ್ಲಿ ಗರ್ಭ ಗುಡಿಯಲ್ಲಿ ಆದ ಅನಾಹುತದಲ್ಲಿ ಶ್ರೀ ರಂಗನಾಥ ವಿಗ್ರಹಕ್ಕೆ ಏನೂ ಅಪಾಯವಾಗಿಲ್ಲವೆಂದು ವರದಿ ಆಗಿದೆ

ನ್ಯೂಯಾರ್ಕ್ 22— 1956 ರಲ್ಲಿ ಈಜಿಪ್ಟಿನ ರೈತರಿಗೆ ಲಕ್ಷಾರಿನ 60 ಮೈಲಿ ದೂರದಲ್ಲಿ ' ಗಾಸ್ಪಲ್ ಆಫ್ ಥಾಮಸ್ ' ಎಂಬ ಲಿಖಿತ ಸ್ವತ್ಕ ಸಿಕ್ಕಿತೆಂದೂ, ಅದಂಲ್ಲಿ ಇಲ್ಲೀವರೆಗೆ ಗೊತ್ತಿಲ್ಲದ ಯೇಸುವಿನ ಹೇಳಿಕೆಗಳಿವೆಯೆಂದೂ ಪ್ರಕಟವಾಗಿದೆ.

ಕೊಲೆಗಾಗಿ ವಿವೆ, ವಿವಾಹಣಕ್ಕಾಗಿ-ಕೊಲೆ

ಪುಣೆಯಿಂದ 25 ಮೈಲಿ ದೂರವಿರುವ ಸುಪಾ ಎಂಬಲ್ಲಿನ ಪ್ರಭಾಕರ ಹರಿ ಹಸಾಬನೀಸ ಎಂಬಾತನು, ಇಪ್ಪತ್ತು ವರ್ಷ ವಯಸ್ಸಿನ ತನ್ನ ಪತ್ನಿಯು ಕೊಲೆ ಹಾಗೂ ಮೊರೇಶ್ವರ ಕುಲಕರ್ಣಿ ಎಂಬಾತನ ಕೊಲೆಯು ಅಪಾದನೆಯಲ್ಲಿ ವಿಚಾರ ಣೆಗೊಳಗಾಗಿರುವನು. ಪೋಲೀಸರು ಹಾಜರ್ಪಡಿಸಿದ ಅಪಾದನಾಪತ್ರದಂತೆ ಹಸಾಬನೀಸನು ತನ್ನ ಹೆಂಡತಿಗೂ ಮೊರೇಶ್ವರನಿಗೂ ವಿಷಹಾಕಿಯೇ ಕೊಂದ ನು. ಹಸಾಬನೀಸನು 1948 ರವರೆಗೆ, ಪುಣೆಯಲ್ಲಿ ಶ್ರೀ ಅಚ್ಯುತ ರಾನಡೆ ಎಂ ಬವರಲ್ಲಿ ಅಡುಗೆಯವನಾಗಿದ್ದನು ; ಆಮೇಲೆ ತನ್ನ ಯಜಮಾನನ ಮಗನ ಚಿಕಿ ತ್ಸಾಲಯದಲ್ಲಿ ಕೆಲಸಮಾಡಿಕೊಂಡಿದ್ದು, ತಾನು ಪಡೆದ ಅನುಭವದಿಂದ ಕೆಲ ವರ್ಷಗಳ ಮೇಲೆ ಸುಪಾದಲ್ಲಿ ಒಂದು ಮದ್ದಿನ ಅಂಗಡಿಯಿಟ್ಟು ಡಾಕ್ಟರಿನಂತೇ ಕೆಲಸಕ್ಕೆ ತೊಡಗಿದನು. ಕಳೆದ ವರ್ಷ ಇವನು ಪದ್ಮಾವತಿ ಎಂಬಾಕೆಯನ್ನು ಲಗ್ನವಾದನು ; ಈ ಹುಡುಗಿಯು ಎಸ್ ಎಸ್ ಸಿ ಪರೀಕ್ಷೆಯಲ್ಲಿ ಪ್ರಥಮ ತರಗತಿ ಯಲ್ಲಿ ತೇರ್ಗಡೆ ಹೊಂದಿ ನಗದು ಬಹುಮಾನವನ್ನು ಪಡೆದಿದ್ದಳು ; ಮದುವೆ ಯಾದ ಕೂಡಲೇ ತನ್ನ ಮಕ್ಕಳ ಹೆಂಡತಿಯು ಹೆಸರಿನಲ್ಲಿ ರೂ 50000 ಕ್ಕೆ ಜಂಟಿ ವಿಮೆ ಇಳಿಸಿದನು ; ಜೀವವಿಮಾ ಕಾರ್ಪೊರೇಷನ್ನಿಗೆ ಈತನು ತನ್ನೊಡನೆ ನಗ ದಾಗಿ ರೂ. 38000 ಇದೆಯೆಂದೂ ಹೇಳಿಕೆಯಿತ್ತಿದ್ದನು ; ಮದುವೆಯಾದ ಮೂರು ತಿಂಗಳಲ್ಲಿ, 1958 ನೇ ಅಕ್ಟೋಬರು 5 ರಲ್ಲಿ ಪದ್ಮಾವತಿ ಮಂಚ ಹೊಂದಿ ದಳು. ಹಸಾಬನೀಸನು ವಿಮಾಮೊಬಲಗನ್ನು ಪಡೆಯಲು ಮುಂದಾದನು ; ಜೀವವಿಮಾ ಕಾರ್ಪೊರೇಷನ್ನಿನವರು ತನಿಖೆ ಜರಾಡುವಂತೆ ಪೋಲೀಸರಿಗೆ ತಿಳಿಸಿ ದರು ; ಇದರ ಫಲವಾಗಿ ಹಸಾಬನೀಸನ ದಸ್ತಗಿರಿಯಾಗಿದೆ ಮೊರೇಶ್ವರನೆಂಬ ವನು ತನ್ನ ಉಯಿಲಿನಲ್ಲಿ ತನ್ನ ಎಲ್ಲ ಸ್ವತ್ತುಗಳನ್ನೂ ಹಸಾಬನೀಸನಿಗೆ ಬರೆದಿಟ್ಟಿ ದ್ದನಂತೆ : ಮೊರೇಶ್ವರನ ಹೆಣದ ಪರೀಕ್ಷೆ ನಡೆಸಿದಾಗ ಪಾಷಾಣದ ಕುರುಹು ಸಿಕ್ಕಿತು : ಮೊರೇಶ್ವರನು ಕೊಲೆರಾ ಸತ್ತಿರಲಿಲ್ಲ ; ತನ್ನ ಹೆಂಡತಿ ಸತ್ತುದು ಹೃದಯಸ್ತಂಭನದಿಂದ ಎಂಬದಾಗಿಯೂ ಹೇಳಿರುತ್ತಾನೆ. ಮುಂದಿನ ವಿಚಾರಣೆ ನಡೆಯುತ್ತಲಿದೆ.

ಕೇರಳದಲ್ಲಿನ ಕನ್ನಡಿಗರು

ಕಾಸರಗೋಡು ಕರ್ನಾಟಕ ಪ್ರದೇಶಗಳನ್ನು ಮುಂಬಯಿ ಮೈಸೂರಿನೊಂದಿಗೆ ಸೇರ್ಪಡೆಗೊಳಿಸುವಂತೆ ಅವಶ್ಯವಿರುವ ಕಾರ್ಯಕ್ರಮಗಳನ್ನು ಕೂಡಲೇ ಕೈಗೊ ಳ್ಳುವಂತೆ ಕೇರಳ ಶಾಸನಸಭೆಯ ಏಕಮಾತ್ರ ಕನ್ನಡಿಗ ಸದಸ್ಯ ಶ್ರೀ ಎಂ ಉ ಮೇಶರಾಯರು (ಸ್ವ) ಕಳೆದ ತಾ|| 12 ರಂದು ಶಾಸನಸಭೆಯ ಮುಂದೆ ಅಗ್ರ ಹದ ಕೇಳಿಕೆಯನ್ನು ಮಂಡಿಸಿದ್ದಾರೆ : ಭಾಷಾ ಅಲ್ಪ ಸಂಖ್ಯಾಕರಾಗಿ ಕನ್ನಡಿ ಗರು ವಿದ್ಯಾಭ್ಯಾಸ, ಉದ್ಯೋಗ ಮತ್ತು ವ್ಯವಹಾರ ಕ್ಷೇತ್ರಗಳಲ್ಲಿ ಅನುಭವಿಸು ತ್ತಿರುವ ವಿವಿಧ ಅಸೌಕರ್ಯಗಳನ್ನು ಶ್ರೀ ಉಮೇಶರಾಯರು ವಿವರಿಸುತ್ತಾ, ಕನ್ನಡಿಗರು ಕೇರಳ ಸರಕಾರಕ್ಕೆ ಭಾರವಾಗಿರುವುದು ಬೇಡವೆಂದು ಕೇಳಿಕೊಂಡಿ ದ್ದಾರೆ.

SHAKTI
SUDHA

A Superb Tonic

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — [ದಿನ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ — ನೋಡಲು ಮರೆಯಬೇಡಿ
ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು
ದಿಗ್ದರ್ಶನ : ರಾಜ್ ಖೋಸ್ಲ ಸಂಗೀತ : ಎಸ್. ಡಿ. ಬರ್ಮನ್

ಅಪೆರಾ— 20-3-59 ರಿಂದ
ಅತ್ಯಮೋಘ ಕನ್ನಡ ಚಿತ್ರ ಪ್ರತಿದಿನ 3 ಆಟಗಳು

ಕಪ್ಪು ಗಾರುಡಿ (ಕನ್ನಡ)

ಪಾತ್ರ— ರಾಜಕುಮಾರ್, ರಾಮಚಂದ್ರಶಾಸ್ತ್ರಿ, ನರಸಿಂಹರಾಜು, ಗಣಪತಿಭಟ್
ರಮಾದೇವಿ ರೇವತಿ, ಸೂರ್ಯಕಲಾ, ಲಲಿತಾರಾವ್ ಬಿ ಎ.

ಸಿಲೋನಿನ 33 ಸದಸ್ಯರ ನೃತ್ಯಗಾರರು ಮತ್ತು ಸಂಗೀತಗಾರರ ನಿಯೋಗ ಈಗ ಭಾರತಕ್ಕೆ ಭೇಟಿ ಕೊಟ್ಟಿರುವರು : 3 ವಾರವಿದ್ದು ದೇಶದ ಹಲವು ಮುಖ್ಯ ಸ್ಥಳಗಳಿಗೆ ಭೇಟಿ ಕೊಟ್ಟು ಕೆಲವು ಕಡೆ ಪ್ರದರ್ಶನ ನಡೆಸುವರು

Edited, Printed & Published by Dharma Prachara Nimta M. Krishna Rao, at the Satyavadi Press Chamarajapuram, Mysore